ಬಿಟ್ಟಿದೆ. ಪುರಸಭೆ ವ್ಯಾಪ್ತಿಯೊಳಗೆ ಒಡೆಯುತ್ತಿದ್ದೀರಿ. ಸ್ಟೇಟ್ ಹೈವೆಯಲ್ಲಿ ನ್ಯಾಷನಲ್ ಹೈವೆಯಲಿ ಒಡೆಯುತ್ತಿದ್ದೀರಿ. Road centre ನಿಂದ 45 ಮೀಟರ್ ಒಡೆಯಬೇಕೆಂದರೆ ಇಷ್ಟು ವರ್ಷ ಬಂದಿರುವ ಮಾನ್ಯುಮೆಂಟ್ಸ್‌ನೆಲ್ಲಾ ಒಡೆಯಬೇಕಾದಂಥ ಸ್ಥಿತಿ ತಂದಿದ್ದೀರಿ. ಈ ಬಗ್ಗೆ ಸರ್ಕಾರಕ್ಕೆ ಏನಾದರೂ ಒಂದು ನೀತಿ ಇದೆಯೆ? ಕಾಲಕಾಲಕ್ಕೆ ನೀವು ಕೊಟ್ಟಿರುವ ಆದೇಶಗಳಿಗೆ ವೈಜ್ಞಾನಿಕವಾಗಿ ಏನಾದರೂ back ground ಇದೆಯೋ? ಅವರು ಹೇಳಬಹುದಾಗಿತ್ತು. ಏತಕ್ಕೆ ಕಾಲಾವಕಾಶ ಕೇಳಿದ್ದಾರೋ ನನಗೆ ಗೊತ್ತಿಲ್ಲ. ಮತ್ತೆ ಕಾಲಾವಕಾಶ ಬೇಕಾದರೆ ಈ ಶಾಸನ ಸಭೆ ಮುಕ್ತಾಯವಾಗುವುದರ ಒಳಗೆ ಈ ವಿಷಯವನ್ನು ನಾವು ಚರ್ಚೆ ಮಾಡಲು ಬಿಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಇದಕ್ಕೆ ಸಹಿ ಮಾಡಿದ್ದೇನೆ. ನಾನು ಒಂದು ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು: ಅದನ್ನು ಒಪ್ಪಿಕೊಂಡೆ. ಮಾನ್ಯ ಮುಖ್ಯಮಂತ್ರಿಯವರು ಸಮಯ ಕೇಳಿದ್ದಾರೆ. ಆವತ್ತು ತಾವು ಕೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಒಂದು ನಿಮಿಷ ಕೇಳಿ. ನಾವು ಇಲ್ಲಿ ಪ್ರತ್ಯೇಕವಾಗಿ ಬಹಳ ಮುಖ್ಯವಾಗಿ ಕೇಳುತ್ತಿರುವುದು, ರಾಜ್ಯದ ಮಾಹಿತಿಯನ್ನೆಲ್ಲಾ ಕೇಳಲಿಲ್ಲ. ನಾವು ಕೇಳಿರತಕ್ಕದ್ದು ಸರ್ಕಾರದ ನಿಯಮವೇನು? ನಾನು ಮಾನ್ಯ ಮಾಧುಸ್ವಾಮಿಯವರು ಗೊಟ್ಟಿಗೆರೆಗೆ ಹೋಗಿದ್ದೆವು. ಬಿ.ಎಂ.ಐ.ಸಿ.ಪಿ.ಯಿಂದ ರೋಡ್ ಅಕ್ವೈರ್ ಆಗಿದೆ. ಅಕ್ವೈರ್ ಆಗಿರತಕ್ಕ ಭೂಮಿಯನ್ನು ಬಿಟ್ಟು ಬೇರೆ ಕಡೆ ಬುಲ್ಡೋಜರ್ ತೆಗೆದುಕೊಂಡು ಹೋಗಿ ಒಡೆಯುತ್ತಿದ್ದಾರೆ. ಆ ರೀತಿ ಒಡೆಯಬೇಕಾದರೆ ಅಕ್ವೈರ್ ಭೂಮಿ ಯಾವ ಜಾಗದಲ್ಲಾಗಿದೆ, ಇಂಥ ಭೂಮಿಯಲ್ಲೇ ರಸ್ತೆ ಮಾಡಬೇಕೆಂದು ತೋರಿಸತಕ್ಕ ಪಿ.ಡಬ್ಲ್ಯೂ.ಡಿ. ಅಧಿಕಾರಿಗಳು ಅಲ್ಲಿದ್ದಾರೆಯೆ? ಅದನ್ನು ತೋರಿಸಿದ್ದಾರೆಯೆ? ಅಥವಾ ಪಿ.ಎಂ.ಐ.ಸಿ.ಪಿ. ನವರೇ ಯಾರಾದರೂ ಅವರಷ್ಟಕ್ಕೆ ಅವರೇ ಹೋಗಿ ಒಡೆದರಾ? Who is the authority? ನೀವು ಅಕ್ವೈರ್ ಮಾಡಿಕೊಳ್ಳಿ, ಕಾನೂನಿನಲ್ಲಿ ಅವಕಾಶ ಇದೆ. ರಸ್ತೆ ಮಾಡಬೇಕಾದರೆ ಸಾರ್ವಜನಕ ಕೆಲಸಗಳಿಗೆ ನೀವು ಕಟ್ಟಡಗಳನ್ನು ಅಕ್ವೈರ್ ಮಾಡಿಕೊಳ್ಳಬಹುದು. ಕಾನೂನಿನ ಅಡಿಯಲ್ಲಿ ಅದನ್ನು ಪರಿಹಾರ ಮಾಡಬಹುದು. ಪ್ರಶ್ನೆ ಇರತಕ್ಕದ್ದು ಯಾವುದೇ ಆಧಾರವಿಲ್ಲದೇನೇ, ಮಾಹಿತಿ ಇಲ್ಲದೆಯೆ ಯಾರೋ ಒಬ್ಬರು ಕಂಟ್ರಾಕ್ಟರ್ ಬುಲ್ಡೋಜರ್ ತೆಗೆದುಕೊಂಡು ಹೋಗಿ ಜೆ.ಸಿ.ಬಿ. ತೆಗೆದುಕೊಂಡು ಹೋಗಿ ಆ ಜಾಗದಲ್ಲಿ ರಸ್ತೆ ಮಾಡಿಕೊಂಡು ಹೋಗುತ್ತಿದ್ದರೆ ಸರ್ಕಾರ ನೀತಿಯೇನು ಎನ್ನತಕ್ಕದಷ್ಟೇ ನಮ್ಮ ಪ್ರಶ್ನೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಯವರು ಸಮಯ ಕೇಳಿದ್ದಾರೆ. ಸದನ ಮುಗಿಯುವುದರೊಳಗೆ ವಿವರವಾದ ವರದಿಯನ್ನು ತರಿಸಿ ಮಂಡಿಸುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅಲ್ಲಿಯವರೆಗೆ ಅಂಥ ಡೆಮಾಲಿಷನ್ಸ್ ಎಲ್ಲವನ್ನೂ ನಿಲ್ಲಿಸಬೇಕು.

ಶ್ರೀ ಎಸ್. ಶಿವಾನಂದ ಪಾಟೀಲ್: ಎಲ್ಲವನ್ನೂ ನಿಲ್ಲಿಸಲು ಆಗುವುದಿಲ್ಲ.

ಆ) ವಿಷಯ: ಲೋಕೋಪಯೋಗಿ ಇಲಾಖೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಹೊರಡಿಸಿರುವ ಸುತ್ತೋಲೆ ಬಗ್ಗೆ.

ಶ್ರೀ ಬಿ. ಶಿವರಾಮ್ (ಗಂಡಸಿ): ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆಯಿಂದ ಹೊರಡಿಸಿರತಕ್ಕ ಕೆಲವು ಸುತ್ತೋಲೆಗಳನ್ನು ಉಲ್ಲೇಖಿಮಾಡುವುದರ ಮೂಲಕ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಏನು ಕ್ರಮ ತೆಗೆದುಕೊಂಡಿದ್ದಾರೆ? ಕೆಲವು ಗುತ್ತಿಗೆದಾರರು ಈಗಾಗಲೇ ಅದರ ಬಗ್ಗೆ ಪ್ರತಿಭಟನೆಯನ್ನು ಮಾಡಿದ್ದಾರೆ. ಆ ವಿಚಾರವಾಗಿ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಹೇಳಿಕೆಯನ್ನು ಮಾಡಲಿಚ್ಚಿಸುತ್ತೇನೆ.

ಕೆಲವು ರಸ್ತೆಗಳ ಮತ್ತು ಕಟ್ಟಡಗಳ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಲ್ಲಿನ ಕೆಲವು ಲೋಪದೋಷಗಳ ಬಗ್ಗೆ ಹಾಗೂ ಕಾಮಗಾರಿಗಳನ್ನು ಕೈಗೊಳ್ಳುವಾಗಿನ ಅನಾವಶ್ಯಕವಾದ ವಿಳಂಬ ಮತ್ತು ಸಕಾಲದಲ್ಲಿ ಪೂರ್ಣಗೊಳಿಸದಿರುವ ಬಗ್ಗೆ ದೂರುಗಳು ಬರುತ್ತಿರುವ ಹಿನ್ನೆಲೆಯಲ್ಲಿ ಸಂ:ಲೋಇ 142 ಐ.ಎಫ್.ಎ 2005 ದಿನಾಂಕ 20.06.2006ರಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿದ್ದು ಅದರಂತೆ ಲೆಕ್ಕ ಶೀರ್ಷಿಕೆ:3054 ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ ಅಡಿಯಲ್ಲಿ ಹಣ ಪಾವತಿ ಮಾಡುವ ಮುನ್ನ ದಿನಾಂಕ:01–04–2004ಕ್ಕಿಂತ ಹಿಂದೆ ಲೋಕೋಪಯೋಗಿ ಇಲಾಖೆಯಲ್ಲಿ ಕೈಗೊಂಡಿರುವ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸುವ ಮುನ್ನ ಮುಖ್ಯ ಇಂಜಿನಿಯರ್‌ರವರು ಸಂಬಂಧಪಟ್ಟ ಅಧೀಕ್ಷಕ ಇಂಜಿನಿಯರ್‌ರವರು ಮತ್ತು ಕಾರ್ಯಪಾಲಕ ಇಂಜಿನಿಯರ್‌ರವರೊಂದಿಗೆ ಜಂಟಿ ಪರಿವೀಕ್ಷಣೆ : ತಪಾಸಣೆ ನಡೆಸಿ, ಮಂಜೂರಾದ ಅಂದಾಜಿನ ಅನುಸಾರ ಕಾಮಗಾರಿಗಳನ್ನು ಸಮರ್ಪಕವಾಗಿ ಪೂರ್ಣಗೊಳಿಸಲಾಗಿದೆಯೇ : ಕೈಗೆತ್ತಿಕೊಳ್ಳಲಾಗಿದೆಯೇ ಎಂಬುದನ್ನು ಮನವರಿಕೆ ಮಾಡಿಕೊಂಡ ನಂತರವೇ ಅಂತಹ ಬಿಲ್ಲುಗಳನ್ನು ಪಾವತಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಹಾಸನ ಜಿಲ್ಲೆಯಲ್ಲಿ ದಿನಾಂಕ: 01–04–2004ಕ್ಕಿಂತ ಹಿಂದೆ ಕೈಗೊಂಡಿದ್ದ ಕಾಮಗಾರಿಗಳಲ್ಲಿ ಒಟ್ಟು 1016 ಕಾಮಗಾರಿಗಳಿಗೆ ಸಂಬಂಧಿಸಿದಂತೆ ರೂ.963.85 ಲಕ್ಷಗಳ ಬಾಕಿ ಬಿಲ್ಲುಗಳಿದ್ದು ಅವುಗಳನ್ನು ಪಾವತಿಸಲು ಮುಖ್ಯ ಇಂಜಿನಿಯರ್‌ರವರು ಸಂಬಂಧಪಟ್ಟ ಅಧೀಕ್ಷಕ ಇಂಜಿನಿಯರ್‌ರವರು ಮತ್ತು ಕಾರ್ಯಪಾಲಕ ಇಂಜಿನಿಯರ್‌ರವರೊಂದಿಗೆ ಜಂಟಿ ಪರಿವೀಕ್ಷಣೆ: ತಪಾಸಣೆ ನಡೆಸಿ ಬಿಲ್ಲುಗಳನ್ನು ಒಪ್ಪಿಕೊಳ್ಳಲು ಸೂಚಿಸಲಾಗಿದೆ. ಆದರೆ ಹಾಸನ ಜಿಲ್ಲೆಯಲ್ಲಿ ಕೈಗೆತ್ತಿಕೊಂಡಿದ್ದ ಶ್ರವಣಬೆಳಗೊಳದ ಬಾಹುಬಲಿ ಮೂರ್ತಿಯ ಮಹಾಮಸ್ತಾಕಾಭಿಷೇಕಕ್ಕೆ ಸಂಬಂಧಪಟ್ಟ ವಿವಿಧ ಅಭಿವೃದ್ಧಿ ಕಾಮಗಾರಿಗಳು, ಹಾಸನದಲ್ಲಿ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಸರ್ಕಾರಿ ವೈದ್ಯಕೀಯ ವಿಜ್ಞಾನ ಕಾಲೇಜು ಕಟ್ಟಡದ ಕಾಮಗಾರಿಗಳು, ನಬಾರ್ಡ್ ಸಹಾಯದಡಿಯಲ್ಲಿ ಕೈಗೆತ್ತಿಕೊಳ್ಳಲಾಗಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳಂತಹ ಕಾಲಮಿತಿ ಕಾಮಗಾರಿಗಳು, ಅನಿರೀಕ್ಷಿತ ಅತಿವೃಷ್ಟಿಯಿಂದ ಹಾನಿಗೊಳಗಾದ ಕಾಮಗಾರಿಗಳು ಹಾಗೂ ಇನ್ನಿತರ ಅತೀ ಅವಶ್ಯವಿರುವಂತಹ ನಿರ್ವಹಣಾ ಕಾಮಗಾರಿಗಳನ್ನು ನಿರ್ವಹಿಸುವ ಒತ್ತಡದಲ್ಲಿದ್ದ ಹಿನ್ನೆಲೆಯಲ್ಲಿ ಹಾಸನ ವೃತ್ತದ ಅಧೀಕ್ಷಕ ಇಂಜಿನಿಯರ್‌ರವರು ಮತ್ತು ಹಾಸನ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರೊಂದಿಗೆ ಮೇಲ್ಕಂಡ ಒಟ್ಟು 1016 ಕಾಮಗಾರಿಗಳ ಜಂಟಿ ಪರಿವೀಕ್ಷಣೆ : ತಪಾಸಣೆಯನ್ನು ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲವೆಂದು ಮುಖ್ಯ ಇಂಜಿನಿಯರ್, ದಕ್ಷಿಣ ವಲಯ, ಇವರು ತಿಳಿಸಿರುತ್ತಾರೆ.

ಎಲ್.ಓ.ಸಿ. ಬಿಡುಗಡೆಯ ಸಂಬಂಧದಲ್ಲಿನ ಮಾರ್ಗಸೂಚಿ ಸಂ:ಪಿಡಬ್ಲ್ಯೂಡಿ:260: ಎಫ್‌ಸಿ:2000(ವಿ), ದಿನಾಂಕ:25–09–2001 (ಅಧಿಕೃತ ಟಿಪ್ಪಣಿ) ಹಾಗೂ 30–10–2001ರ ಅನ್ವಯ ಬಿಡುಗಡೆಯಾದ ಎಲ್.ಓ.ಸಿ.ಯನ್ನು ಉಪಯೋಗಿಸಿಕೊಳ್ಳುವಾಗ ಕೆಳಗಿನಂತೆ ಕ್ರಮ ಕೈಗೊಳ್ಳುವುದು ಅವಶ್ಯಕವಾಗಿರುತ್ತದೆ.

1. ಶೇಕಡಾ 80ರಷ್ಟು ಎಲ್.ಓ.ಸಿ. ಮೊತ್ತವನ್ನು ಜ್ಯೇಷ್ಠತೆ ಆಧಾರದಲ್ಲಿ ಬಾಕಿ ಬಿಲ್ಲುಗಳನ್ನು ಪಾವತಿಸಲು ಉಪಯೋಗಿಸುವುದು.

2. ಶೇ. 20 ರಷ್ಟು ಎಲ್.ಓ.ಸಿ. ಮೊತ್ತದಲ್ಲಿ:-

ಅ. ಕಾಲಮಿತಿ ಹೊಂದಿದ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸುವುದು.

ಆ. ನ್ಯಾಯಾಲಯ ಆದೇಶಗಳಿಗೆ ಸಂಬಂಧಿಸಿದ ಪಾವತಿಗಳನ್ನು ಮಡುವುದು. (ಭೂಪರಿಹಾರಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ನಿಂದನೆ ಅಥವಾ ಸರ್ಕಾರಿ ಆಸ್ತಿಯ ಮುಟ್ಟುಗೋಲಿಗೆ ಸಂಬಂಧಿಸಿದ ಪಾವತಿಗಳು)

ಇ. ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದ ಅಥವಾ ಇನ್ನಿತರೆ ತುರ್ತು ಕಾಮಗಾರಿಗಳಿಗೆ ಸಂಬಂಧಿಸಿದ ಬಿಲ್ಲುಗಳನ್ನು ಪಾವತಿಸುವುದು.

3. ಅದಲ್ಲದೆ ಮೇಲಿನ ಶೇ.90 ಎಲ್ಓಸಿ ಮೊತ್ತದಲ್ಲಿ ಶೇ.20ರಷ್ಟು ಹಣವನ್ನು ಭೂ ಪರಿಹಾರಕ್ಕೆ ಸಂಬಂಧಿಸಿದ ಡೆಪಾಸಿಟ್ ಅಥವಾ ಅಂತಿಮ ತೀರುವಳಿಗಾಗಿ ಉಪಯೋಗಿಸುವುದು.

4. ಹಾಗೆಯೇ ಮೇಲಿನ ಶೇ.80ರಷ್ಟು ಎಲ್ಓಸಿ ಮೊತ್ತದಲ್ಲಿ ಶೇ.10ರಷ್ಟು ಮೊತ್ತವನ್ನು ನೀರು, ತೆರಿಗೆ ಹಾಗೂ ವಿದ್ಯುಚ್ಛಕ್ತಿ ಬಿಲ್ಲುಗಳನ್ನು ಪಾವತಿಸಲು ಉಪಯೋಗಿಸುವುದು.

ಸರ್ವೇಸಾಮಾನ್ಯವಾಗಿ ಹಾಸನ ಲೋಕೋಪಯೋಗಿ ಇಲಾಖೆಯ ವಿಭಾಗ ಕಚೇರಿಯಲ್ಲಿ ಸಹಾ ಮೇಲಿನ ಮಾರ್ಗಸೂಚಿಗಳನ್ನು ಅನುಸರಿಸಿ ಹಣ ಭರವಸೆ ಪತ್ರಗಳನ್ನು (ಎಲ್.ಓ.ಸಿ.) ತೀರುವಳಿ ಮಾಡಲಾಗಿರುತ್ತದೆ. ಅದರಂತೆ ದಿನಾಂಕ:01-04-2004ರಲ್ಲಿದ್ದ ರೂ.2470.48 ಲಕ್ಷಗಳ ಬಾಕಿ ಬಿಲ್ಲುಗಳನ್ನು ಪಾವತಿ ಮಾಡುತ್ತಾ ಬಂದಿದ್ದು ಅದರಲ್ಲಿ ದಿನಾಂಕ:20-06-2005ರ ಸುತ್ತೋಲೆ ಹೊರಡಿಸುವುದಕ್ಕಿಂತ ಮುಂಚೆ ಸುಮಾರು ರೂ.1500.00 ಲಕ್ಷಗಳಷ್ಟು ಹಣವನ್ನು ಪಾವತಿ ಮಾಡಲಾಗಿದ್ದು, ಕಾಮಗಾರಿಗಳ ಬಗ್ಗೆ ಬಂದ ದೂರುಗಳ ಹಿನ್ನೆಲೆಯಲ್ಲಿ ಸುತ್ತೋಲೆ ಸಂ:ಲೋಇ:142:ಐಎಫ್ಎ:2005:ದಿನಾಂಕ:20-06-2005ರಂತೆ ಹಾಸನವೃತ್ತದ ಅಧೀಕ್ಷಕ ಇಂಜಿನಿಯರ್‌ರವರು ಮತ್ತು ಹಾಸನ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರು ಜಂಟಿ ಪರಿವೀಕ್ಷಣೆ:ತಪಾಸಣೆ ಮಾಡಬೇಕಿರುವ ಕಾಮಗಾರಿಗಳ ಒಟ್ಟು ರೂ.963.85 ಲಕ್ಷಗಳ ಮೊತ್ತದ ಬಿಲ್ಲುಗಳು ಬಾಕಿ ಉಳಿದಿರುತ್ತವೆ. ಅಲ್ಲದೆ, ವಿಭಾಗಕ್ಕೆ ಬಿಡುಗಡೆಯಾದ ಹಣ ಭರವಸೆ ಪತ್ರದ ಮೊತ್ತದಲ್ಲಿ ದಿನಾಂಕ:01-04-2004ರ ನಂತರ ಕೈಗೊಳ್ಳಲಾದ ಕಾಮಗಾರಿಗಳ ಬಿಲ್ಲುಗಳಲ್ಲಿ ರೂ.85.59 ಲಕ್ಷಗಳ ಬಿಲ್ಲುಗಳನ್ನು ಹೊರತುಪಡಿಸಿ ಉಳಿದೆಲ್ಲಾ ಬಿಲ್ಲುಗಳನ್ನು ಪಾವತಿ ಮಾಡಲಾಗಿರುತ್ತದೆ.

ದಿನಾಂಕ:01-04-2004 ಕ್ಕಿಂತ ಹಿಂದೆ ಕೈಗೊಂಡಿದ್ದ ಕಾಮಗಾರಿಗಳ ಜಂಟಿ ತಪಾಸಣೆಯನ್ನು ಶೀಘ್ರದಲ್ಲಿಯೇ ಪೂರ್ಣಗೊಳಿಸಿ ಸದರಿ ಬಾಕಿ ಬಿಲ್ಲುಗಳನ್ನು ಪಾವತಿಸಲು ನಿಯಮಾನುಸಾರ ಸೂಕ್ತಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ. ಶಿವರಾಮ್: ಮಾನ್ಯ ಅಧ್ಯಕ್ಷರೆ, ಈಗಾಗಲೆ ಈ ವಿಚಾರದ ಬಗ್ಗೆ ಈ ಹಿಂದೆ ನಮ್ಮ ಮುಖ್ಯಮಂತ್ರಿಗಳಾಗಿದ್ದ ಧರ್ಮ್‌ಸಿಂಗ್‌ರವರ ಗಮನಕ್ಕೂ ನಾನು ತಂದಿದ್ದೆ. 1.4.2004ರ ಹಿಂದೆ ನಡೆದಿರುವ ಕಾಮಗಾರಿಗಳನ್ನು ಮಾತ್ರ ಇನ್ಸ್‌ಪೆಕ್ಷನ್ ಮಾಡಬೇಕೆಂದು ಸುತ್ತೋಲೆ ಹೊರಡಿಸಿತ್ತು. ಇಲ್ಲಿಗೆ ಸರಿಯಾಗಿ ಎರಡು ವರ್ಷವಾಯಿತು, ಎರಡು ವರ್ಷದ ಕಾಮಗಾರಿಗೆ ಮಾತ್ರ ವಿಶೇಷವಾದ ತಪಾಸಣೆ, Superintendent Engineer, Exective Engineer ರಿಂದ ಮಾಡಬೇಕೆಂದು ಸುತ್ತೋಲೆ ಬಂದಿದ್ದು, ಅದಕ್ಕೆ ನನ್ನ ಸ್ವಾಗತ. ನಾನು ತಪ್ಪು ಎಂದು ಹೇಳುತ್ತಿಲ್ಲ.

ಆದರೆ ಇಲ್ಲಿಯವರೆಗೆ ಏಕೆ ಮಾಡಲಿಲ್ಲ? ನಿಮ್ಮ ಕ್ಷೇತ್ರದ ಕಾಮಗಾರಿಗಳು ಈ ರೀತಿ ಇದ್ದರೆ ತಾವು ಏನು ಮಾಡುತ್ತಿದ್ದಿರಿ? ಎರಡು ವರ್ಷಗಳ ಹಿಂದಿನ ಕಾಮಗಾರಿಗಳನ್ನು ಇನ್ನೂ ಅವರು ಇನ್ಸ್‌ಪೆಕ್ಷನ್ ಮಾಡಿ ವರದಿ ಕೊಟ್ಟಿಲ್ಲ, ಅದು ಕೊಡದೆ LOC ಬಿಡುಗಡೆ ಆಗುವುದಿಲ್ಲ, ಸಾಧಾರಣ ಒಂಭತ್ತೂವರೆ ಕೋಟಿ ರೂ. ಕಾಮಗಾರಿಗಳು ಬಾಕಿ ಇದೆ ಎಂದರೆ, ತಾವು ಅಧ್ಯಕ್ಷರಾಗಿ ಆ ನ್ಯಾಯ ಪೀಠದಲ್ಲಿ ಕುಳಿತುಕೊಂಡು ಏನು ಹೇಳುತ್ತೀರಿ ಎಂಬುದನ್ನು ಹೇಳಿ. ಈಗ ಅವರೇ ಸಮಂಜಸವಾಗಿ ಒಪ್ಪಿಕೊಂಡಿದ್ದಾರೆ. ಸರ್ಕಾರದ ಸುತ್ತೋಲೆಯನ್ನೂ ಕೂಡ ಕೊಟ್ಟಿದ್ದಾರೆ, ಮಾರ್ಗಸೂಚಿ ಕೂಡ ಇದೆ. ಆ ಭಾಗದ ಗುತ್ತಿಗೆದಾರರು ಪ್ರತಿಭಟನೆಯನ್ನು ಕಛೇರಿ ಮುಂದೆ ಮಾಡಿದ್ದಾರೆ. ಇದರಲ್ಲಿ ಏನಾದರೂ ನ್ಯಾಯ ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಳ್ಳುತ್ತಾರೆಯೇ? 1.4.2004ರ ಹಿಂದಕ್ಕೆ ಅಂದರೆ, ಕಾಂಗ್ರೇಸ್ ಆಡಳಿತದ ಅವಧಿಯಲ್ಲಿ ಆದಂತಹ ಕಾಮಗಾರಿಗಳನ್ನು ಮಾತ್ರ ವಿಶೇಷವಾಗಿ ಇನ್ಸ್‌ಪೆಕ್ಷನ್ ಆಗಬೇಕು ಅನ್ನತಕ್ಕಂಥ ಒಂದು ಸುತ್ತೋಲೆ ಆಗುವುದಾದರೆ, ಅದೂ ತಪ್ಪಲ್ಲ, ಆದರೆ ಇಲ್ಲಿಯವರೆಗೂ ಏಕೆ ಇನ್ಸ್‌ಪೆಕ್ಷನ್ ಅನ್ನು ಮಾಡಲಿಲ್ಲ? ಎರಡು ವರ್ಷಗಳ ಅವಧಿ ಬೇಕೇ?

ಶ್ರೀ ಸಿ.ಎಸ್.ಪುಟ್ಟೇಗೌಡ: ಮಾನ್ಯ ಅಧ್ಯಕ್ಷರೆ, Education ಇಲಾಖೆಯಲ್ಲೆಲ್ಲಾ ಹಿಂದೆಲ್ಲಾ ಮಾಡಿಲ್ಲವೇ ಸ್ವಾಮಿ? ಅದೇ ಚನ್ನರಾಯಪಟ್ಟಣ division ನಲ್ಲಿ ಮಾಡಿದ್ದೀರಿ, ಎಲ್ಲಾ ಕಡೆ ಮಾಡಿ 25% ಬಿಲ್ಲೆಲ್ಲಾ ಕಳೆದಿದ್ದೀರಿ. . .

(ಗೊಂದಲ)

ಶ್ರೀ ಬಿ. ಶಿವರಾಂ: ಪುಟ್ಟೇಗೌಡರೆ, ನೀವು ಬಹಳ ಒಳ್ಳೆಯವರು . . . . . .

ಅಧ್ಯಕ್ಷರು: ಈಗ ಚರ್ಚೆ ಬೇಡ. ಇಲ್ಲಿ ಚರ್ಚೆಗೆ ಅವಕಾಶವಿಲ್ಲ, ಮಾನ್ಯ ಶಿವರಾಂರವರೆ, ಈಗ ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಬಿ. ಶಿವರಾಂ: ಮಾತನಾಡಲಿ ಬಿಡಿ, ಸತ್ಯ ಏನಿದೆ ಎಂಬುದನ್ನು ಹೇಳಲಿ. ನಾನು ಯಾರ ಮೇಲೂ ದೋಷರೋಪಣೆ ಮಾಡುತ್ತಿಲ್ಲ. ಸಂಬಂಧಪಟ್ಟಂತಹ ಅಧಿಕಾರಿಗಳು ಏಕೆ ಇನ್ಸ್‌ಪೆಕ್ಷನ್ ಮಾಡುತ್ತಿಲ್ಲ? ಅವರನ್ನು ಅಮಾನತ್ತು ಮಾಡಬೇಕು. ಈ ರೀತಿಯಾದರೆ ಸರ್ಕಾರದ ಸುತ್ತೋಲೆಗೆ ಗೌರವ ಇಲ್ಲವೇ? ಇಲ್ಲಿ ಶಾಸಕರು ಇಷ್ಟು ಜನರಿದ್ದೀರಿ, ಇಲ್ಲಿ ನ್ಯಾಯ ಇದೆಯೇ ಹೇಳಿ ನೋಡೋಣ.....

ಅಧ್ಯಕ್ಷರು: ಮಾನ್ಯ ಶಿವರಾಂರವರೆ, ಏಕೆ ನೀವು ಉದ್ದೇಗಕ್ಕೊಳಗಾಗುತ್ತೀರಿ? ಇಲ್ಲಿ ಚರ್ಚೆಗೆ ಅವಕಾಶವಿಲ್ಲ. ಮಾನ್ಯ ಮುಖ್ಯಮಂತ್ರಿಗಳು . . . . . .

ಶ್ರೀ ಬಿ. ಶಿವರಾಂ: . . ಮಾನ್ಯ ಪುಟ್ಟೇಗೌಡರು ಪ್ರಸ್ತಾಪಿಸಿದ್ದಕ್ಕೆ ನಾನು ಮಾತನಾಡಬೇಕಾಯಿತು. ನಾನು ಕಾನೂನು ಏನಿದೆಯೋ, ಅಷ್ಟನ್ನು ಮಾತ್ರ ಇಲ್ಲಿ ಕೇಳುತ್ತಿದ್ದೇನೆಯೇ ಹೊರತು, ಅದನ್ನು ಮೀರಿ ಹೋಗುವುದಿಲ್ಲ. ನಾನು ಅನಾವಶ್ಯಕವಾಗಿ ಸದನದಲ್ಲಿ ಮಾತನಾಡುವುದಿಲ್ಲ. ಇಲ್ಲದ ವಿಚಾರಗಳಿಗೆ ಹಸ್ತಕ್ಷೇಪ ಮಾಡುವುದಿಲ್ಲ . . .

ಅಧ್ಯಕ್ಷರು: ಚರ್ಚೆಗೆ ಅವಕಾಶವಿಲ್ಲ. ಚರ್ಚೆಗೆ ಬೇಕಾದರೆ ಯಾವಾಗಲಾದರೂ ಅವಕಾಶ ಕೊಡೋಣ. ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ, ದಯಮಾಡಿ ಕುಳಿತುಕ್ಕೊಳ್ಳಿ.

ಶ್ರೀ ಬಿ. ಶಿವರಾಂ: . . . ಇದರಲ್ಲಿ ಏನಾದರೂ ನ್ಯಾಯ ಇದೆಯೇ ಎಂದು ಯೋಚನೆ ಮಾಡಿ ಹೇಳಿ. ಅಧಿಕಾರಿಗಳ ಮೇಲೆ ನೀವೇನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದು ನನಗೆ ಬೇಕಾಗಿದೆ.

ಅಧ್ಯಕ್ಷರು: ಆಯಿತು, ಅದನ್ನು ಹೇಳುತ್ತಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಈ ಸುತ್ತೋಲೆಯನ್ನು ಹೊರಡಿಸಿರತಕ್ಕಂಥ ದಿನಾಂಕ 20.06.2005. ಇದು ಕೇವಲ ಹಾಸನ ಜಿಲ್ಲೆಗೆಂದು ಹೊರಡಿಸಿರತಕ್ಕಂಥದ್ದು ಅಲ್ಲ. ರಾಜ್ಯದ ಎಲ್ಲಾ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಹೊರಡಿಸಿರತಕ್ಕಂಥ ಸುತ್ತೋಲೆ ಇದಾಗಿದೆ. ಈಗಾಗಲೇ ನಾನು ನನ್ನ ಉತ್ತರದಲ್ಲಿ ಹೇಳಿದ ಹಾಗೆ, ಹಾಸನದ ಶ್ರವಣ ಬೆಳಗೊಳ ಮಸ್ತಕಾಭಿಷೇಕದ ಹಿನ್ನೆಲೆಯಲ್ಲಿ, ಬೇರೆ ಬೇರೆ ತುರ್ತು ಕಾಮಗಾರಿಗಳನ್ನು ತೆಗೆದುಕೊಳ್ಳ ಬೇಕಾದಂತಹ ಹಿನ್ನೆಲೆಯಲ್ಲಿ ಈ ವಿಷಯದಲ್ಲಿ ಸ್ವಲ್ಪ ಸಮಯ ಬೇಕಾಗಿದೆ. ಆ ದೃಷ್ಟಿಯಿಂದ ಇದು ಸ್ವಲ್ಪ ಹಿನ್ನಡೆಯಾಗಿದೆ. ಅದಷ್ಟು ಬೇಗ ಇದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಆಯಿತು. ಮುಂದಿನ ಗಮನ ಸೆಳೆಯುವ ಸೂಚನೆ, ಮಾನ್ಯ ಚಂದ್ರಶೇಖರ್‌ರವರು ಪ್ರಸ್ತಾಪಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ? ಮಾನ್ಯ ಅಧ್ಯಕ್ಷರೆ, ನಿರ್ದಿಷ್ಟವಾಗಿ ಇದನ್ನು ಹೇಳಿದ್ದರೆ ಚೆನ್ನಾಗಿತ್ತು. ಏಕೆಂದರೆ, ಎರಡೆರಡು ವರ್ಷಗಳ ಕಾಲ ಈ ರೀತಿಯಾಗಿದ್ದರೆ ಸಂಶಯ ಏನು ಬರುತ್ತದೆ ಎಂದರೆ, ಬೇಕು ಎಂದು ಒಬ್ಬ ಸದಸ್ಯರ constituencyಯಲ್ಲಿ ಕೆಲಸ ಆಗಬಾರದು ಅನ್ನತಕ್ಕಂಥ ದೃಷ್ಟಿಯಿಂದ, ಇದನ್ನು ಇಟ್ಟಿದ್ದಾರೆ ಎಂಬುದು ಗೊತ್ತಾಗುತ್ತದೆ. ಅಲ್ಲಿಯ Executive Engineer ಮತ್ತು ಅದಕ್ಕೆ ಸಂಭಂಧ ಪಟ್ಟಂತಹ Chief engineer ಅಥವಾ Executive engineer ಅವರು ಹೋಗಿ, ಒಂದು ಜಿಲ್ಲೆ, ಆ ಜಿಲ್ಲೆಯಲಿ ಇನ್ಸ್‌ಪೆಕ್ಷನ್ ಮಾಡಿಕೊಂಡು ಬಂದು, report ಕೊಟ್ಟು, bill ಕೊಡುವುದಕ್ಕಾಗುವುದಿಲ್ಲವೇ? ಏನಿದು? ಇದೇನಾಗುತ್ತದೆ ಎಂದರೆ, ಇದು ಸೇಡಿನ ರಾಜಕಾರಣ ಆದಂತಾಗುತ್ತದೆ. ಅದಕ್ಕೆ ದಯವಿಟ್ಟು ಇದನ್ನು immediately ಕೊಡಿಸತಕ್ಕಂಥದ್ದನ್ನು ಮಾಡಬೇಕು.

ಅಧ್ಯಕ್ಷರು: ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರಲ್ಲಾ.

ಶ್ರೀ ಬಿ. ಶಿವರಾಂ: ಸಾರ್, ನನಗೆ ನಿರ್ದಿಷ್ಟವಾದಂತಹ ಉತ್ತರ ಬೇಕು. ಏಕೆಂದರೆ ತಾವು ತಾಳ್ಮೆಯನ್ನು ಪರೀಕ್ಷೆ . . . .

ಅಧ್ಯಕ್ಷರು: ಮಾನ್ಯ ಶಿವರಾಂರವರೆ, This is a small matter. ಕೆಲವು ವಿಚಾರಗಳಲ್ಲಿ ಹಿನ್ನಡೆಯಾಗಿದೆ ಎಂದು ಅವರೇ ಹೇಳಿದ್ದಾರೆ. Immediately ಮಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಬಿ. ಶಿವರಾಂ: ಯಾವಾಗ ಎಂದು ನಿರ್ದಿಷ್ಟವಾದಂತಹ ಉತ್ತರ ಬೇಕಾಗಿದೆ. ಇಲ್ಲಿ LOC ಸಮಸ್ಯೆ ಇದೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳೇ, ಮಾನ್ಯ ಸದಸ್ಯರು ತಕ್ಷಣ ಕೊಡಿಸಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಹೆಚ್.ಡಿ. ಕುಮಾರ ಸ್ವಾಮಿ: ಆದಷ್ಟು ಬೇಗ ಇದರ ಬಗ್ಗೆ ಗಮನ ಹರಿಸುತ್ತೇನೆ.

ಶ್ರೀ ಬಿ. ಶಿವರಾಂ: ಮಾನ್ಯ ಅಧ್ಯಕ್ಷರೆ, ನನಗೆ ಇದು ಸಮಾಧಾನವಿಲ್ಲ. ಆದಷ್ಟು ಬೇಗ ಎಂದರೆ ನಾನು ಧರಣಿ ಕುಳಿತುಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಒಂದು ನಿಮಿಷ, ಶಾಸಕರ ಕೆಲಸ LOC ಕೊಡಿಸುವುದಲ್ಲ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶಿವರಾಂರವರು ತಮ್ಮ ಸ್ಥಾನದಿಂದ ನಿರ್ಗಮಿಸಿ ಪತ್ರಿಕಾ ಗ್ಯಾಲರಿಯ ಮುಂದೆ ನಿಂತು ಮಾತನಾಡುತ್ತಿದ್ದರು)

MR. SPEAKER: It will be done immediately ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರಲ್ಲಾ, Immediately ಮಾಡುತ್ತೇನೆ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು, ದಯವಿಟ್ಟು ಇದರ ಬಗ್ಗೆ ಆದ್ಯತೆ ಕೊಟ್ಟು ಮಾಡಬೇಕು. ಇಂತಹ ಸಣ್ಣ ವಿಚಾರಗಳೆಲ್ಲಾ ದೊಡ್ಡದು ಆಗಬಾರದು.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶಿವರಾಂರವರು ತಮ್ಮ ಸ್ಥಾನದಿಂದ ನಿರ್ಗಮಿಸಿ ಪತ್ರಿಕಾ ಗ್ಯಾಲರಿಯ ಮುಂದೆ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು: ಸುಮ್ಮನೆ, ನೀವು ಇಲ್ಲಿ ನಿಂತುಕೊಂಡು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಮಾಡಿಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದರಲ್ಲಿ ಯಾವುದೇ ಸೇಡಿನ ರಾಜಕೀಯದ ಪ್ರಶ್ನೆ ಇಲ್ಲ. ಇದು ಕೇವಲ ಹಾಸನ ಜಿಲ್ಲೆಗೆ ಮಾತ್ರವಲ್ಲ, ಇಡೀ ರಾಜ್ಯದಲ್ಲಿನ LOC ಗಳ ವಿಷಯದಲ್ಲಿ ಇವತ್ತೇನು ಹಣ ಬಿಡುಗಡೆ ಮಾಡಬೇಕಾಗಿದೆಯೋ, ಅದು ನನಗೆ ಗೊತ್ತಿರತಕ್ಕಂಥ ವಿಚಾರವಾಗಿದೆ. ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಈಗಾಗಲೇ ಹೇಳಿದ್ದೇನೆ. ಇದರ ಬಗ್ಗೆ ಮತ್ತೆ ಪುನಃ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇಲ್ಲ.

ಅಧ್ಯಕ್ಷರು: ಮಾನ್ಯ ಚಂದ್ರಶೇಖರ್‌ರವರು ಮಾತನಾಡಿ.

ಶ್ರೀ ಬಿ. ಶಿವರಾಂ (ಮತ್ತೆ ತಮ್ಮ ಸ್ವಸ್ಥಾನಕ್ಕೆ ಹಿಂತಿರುಗಿ): ನಾನು LOC ಬಗ್ಗೆ ಕೇಳುತ್ತಿಲ್ಲ. ನಾನು ಇನ್ಸ್‌ಪೆಕ್ಷನ್ ಏಕೆ ವಿಳಂಬ ಎಂದು ಕೇಳುತ್ತಿದ್ದೇನೆ. ನೀವು LOC ಯಾವತ್ತಾದರೂ ಕೊಡಿ. ನಾನು LOC ಬಗ್ಗೆ ಕಂಟಾಕ್ಟರ್ ಪರವಾಗಿ ಇಲ್ಲಿ ನಿಂತಿಲ್ಲ. SE ಮತ್ತು Executive Engineerಗಳಿಗೆ ಇನ್ಸ್‌ಪೆಕ್ಷನ್ ಮಾಡಲಿಕ್ಕೆ ಹೇಳಿ. ಅವರು at lease inspection ಮಾಡುವುದಿಲ್ಲ ಎಂದರೆ ಹೇಗೆ? ನಾವು ಪ್ರತಿನಿಧಿಗಳಾಗಿ ಏನು ಪ್ರಯೋಜನ? ಅಧಿಕಾರಿಗಳು ನಡೆದುಕೊಳ್ಳುವ ಜವಾಬ್ದಾರಿ ಹೇಗಿದೆ ನೋಡಿ. ನೀವು LOCಯನ್ನು ಯಾವಾಗಲಾದರೂ ಕೊಡಿ. ನಾನು LOCಯನ್ನು ಕೇಳುತ್ತಿಲ್ಲ. ಇದು ತಾರತಮ್ಯ ಎಂದು ನಿಮಗೆ ಅನಿಸುವುದಿಲ್ಲವೇ?

ಅಧ್ಯಕ್ಷರು: ಶಿವರಾಂರವರೆ, ಕುಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಡಿಲೇ ಮಾಡುವುದಕ್ಕೆ ಏನು ಕಾರಣ ಎಂದರೆ ಇದೇ. Executive Engineer, Superintendent Engineer ಅಲ್ಲಿ inspection ಮಾಡದೆ ಹೊರತು bill ಕೊಡುವಂತಿಲ್ಲ. Bill record ಆಗುವುದಿಲ್ಲ. ಅದನ್ನು ಕೊಡುವಾಗ ಮೊದಲು ಸಹಜವಾಗಿ ಕೊಡಬಹುದಾಗಿತ್ತು. ಆದರೆ ಇದಕ್ಕೆ inspection ಮಾಡಿ ಕೊಡಿ ಎಂದು ಹೇಳಿದ ಮೇಲೆ, ಅದು ಅಲ್ಲಿಗೇ ನಿಂತಿದೆ. ಈಗ ಎಲ್ಲಿಯವರೆಗೆ inspection ಮಾಡಿ ಕೊಡಿ ಎಂದು ಹೇಳಿದ ಮೇಲೆ, ಅದು ಅಲ್ಲಿಗೇ ನಿಂತಿದೆ. ಈಗ ಎಲ್ಲಿಯವರೆಗೆ inspection ಆಗುವುದಿಲ್ಲವೋ, ಅಲ್ಲಿಯವರೆಗೆ bill ಸಿಗುವುದಿಲ್ಲ. ಈಗ ಎರಡು ವರ್ಷಗಳಾದ ಮೇಲೆ, ನೀವು ಆ ಕೆಲಸವನ್ನು ಹೋಗಿ ನೋಡುವುದಕ್ಕೆ ಹೋದರೆ, ಅದೊಂದು ತಾಪತ್ರಯವಾಗುತ್ತದೆ, ಅದು ಬೇರೆ. ಅದಕ್ಕೆ ದಯವಿಟ್ಟು ಇಂತಹದ್ದೆಲ್ಲಾ ಯಾರೂ ಕೂಡ ಮಾಡಬಾರದು. ಇದು ಅಭಿವೃದ್ಧಿ ಕೆಲಸಗಳು. ಅವರು ಆದಷ್ಟು ಬೇಗನೆ ನಾನು ಮಾಡುತ್ತೇನೆ ಎಂದು ಅವರು ಹೇಳಿದ್ದಾರೆ. ಇಲ್ಲಿ LOC release

ಪ್ರಶ್ನೆಯಲ್ಲ ಒಂದು ಕಡೆಗೆ inspection ಮಾಡಲಿಕ್ಕೆ ಪ್ರಾರಂಭಿಸಬೇಕು. ಎರಡನೆಯದಾಗಿ ನ್ಯಾಯವಾದಂತಹ ಅವರದೇನು ಬಿಲ್ ಇದೆಯೋ, ಅದನ್ನು ಪಾವತಿ ಮಾಡಬೇಕು. ಇವೆರಡೂ ಇವೆ. ಅವೆರಡನ್ನೂ ನೀವು direction ಕೊಡಿಸಿ ಮಾಡಿಸಬೇಕು.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಹಿರಿಯ ಸದಸ್ಯರಾದಂತಹ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಮತ್ತು ಮಾನ್ಯ ಶಿವರಾಂರವರು ಇಬ್ಬರೂ ಇದರ ಬಗ್ಗೆ ಮಾತನಾಡಿದರು. ಇದು 2001ನೇ ಇಸವಿಯಿಂದ ಬಂದಿರುವಂತಹ ಬಾಕಿಯಾಗಿದೆ. ಇದು ನನ್ನ ಕಾಲದ್ದೇನೂ ಅಲ್ಲ. ನಾನು ಹಿಂದೆ 20 ತಿಂಗಳ ಕಾಲ ಸಚಿವನಾಗಿದ್ದ ಅವಧಿಯದಲ್ಲಿ ಇದು. ಇದರಲ್ಲಿ ರಾಜಕೀಯ ಏನೂ ಇಲ್ಲ. ಪತ್ರಿಕೆಯಲ್ಲಿ ತಪ್ಪಾಗಿ ವರದಿಯಾಗಬಾರದು. ಪತ್ರಿಕೆಗೆ ಮತ್ತು ಈ ರಾಜ್ಯದ ಜನತೆಗೆ ಒಂದು wrong message ಹೋಗಬಾರದು ಎಂಬ ದೃಷ್ಟಿಯಿಂದ ನಾನು ಈ ಸದನದ ಮುಖೇನ ಈ ಮಾತನ್ನು ಹೇಳುತ್ತಿದ್ದೇನೆ. ಇದಕ್ಕೆ 1999ರಲ್ಲಿ 147 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು, ಇದರಲ್ಲಿ 122 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಆ 2001ರ ವರ್ಷದ್ದು 25 ಕೋಟಿ ರೂಪಾಯಿಗಳ ಬಿಲ್ ಬಾಕಿ ಉಳಿಯಿತು. ಮತ್ತೆ 2001–02ರಲ್ಲಿ 169 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು, ಅದರಲ್ಲಿ 122 ಕೋಟಿ ರೂಪಾಯಿಗಳನ್ನು ಕೊಟ್ಟರು. ಆ 2001ರ ವರ್ಷದ್ದು 25 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು, ಅದರಲ್ಲಿ 162 ಕೋಟಿ ರೂಪಾಯಿಗಳನ್ನು ಕೊಟ್ಟರು. 7 ಕೋಟಿ ರೂಪಾಯಿಗಳು pending ಉಳಿಯಿತು. ಇದೇ ರೀತಿಯಲ್ಲಿ ಸುಮಾರು 200 ಕೋಟಿ ರೂಪಾಯಿಗಳ bills ಕಳೆದ ಐದು ವರ್ಷಗಳಲ್ಲಿ pending ಇತ್ತು. ಇದೇನೂ ನನ್ನ ಕಾಲದಲ್ಲಿ. 2000 ರಿಂದ ಐದು ವರ್ಷಗಳಲ್ಲಿ 200 ಕೋಟಿ ರೂಪಾಯಿಗಳು ಪೆಂಡಿಂಗ್ ಇತ್ತು. ಈಗ ನಾವು ಬಂದ ಮೇಲೆ, 2004–05ರಲ್ಲಿ 235 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು, ಅದರಲ್ಲಿ 200 ಕೋಟಿ ರೂಪಾಯಿಗಳನ್ನು ಬಿಲ್ಲಿಗೆ ಕೊಟ್ಟಿದ್ದಾರೆ. ಮಾನ್ಯ ಸಿದ್ದರಾಮಯ್ಯ ಸಾಹೇಬರು ಇದ್ದಾಗಲೇ ಕೊಟ್ಟಿದ್ದರು. ಬಿಲ್ ಬಾಕಿಯಲ್ಲಿ ನಾವು ಅಥವಾ ಅವರು ಎನ್ನತಕ್ಕಂಥ ದೃಷ್ಟಿ ಏನಿಲ್ಲ. ಇಡೀ ರಾಜ್ಯದ ಜನತೆಗೆ ಕೊಟ್ಟಿದೆವು .....

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಷ್ಟು ದಿವಸ ಏಕೆ inspection ಗೆ ಹೋಗಲಿಲ್ಲ ಎಂಬ ಪ್ರಶ್ನೆ ಇಲ್ಲಿ ಬಂತು.....

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: .....ನಾನು ಕೊನೆಯವರೆಗೂ ಹೇಳುವುದಕ್ಕೆ ಅವಕಾಶ ಕೋಡಬೇಕು.....

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಐದು ವರ್ಷ ನಿಮ್ಮ ಸರ್ಕಾರವೇ ಇತ್ತು. ನಾವು ಮಾಡಬೇಡಿ ಎಂದು ಹೇಳಿದ್ದೇವೆ? ಐದು ವರ್ಷಗಳ ಕಾಲ ಮಾನ್ಯ ಧರ್ಮಸಿಂಗ್ ಸಾಹೇಬರೇ PWD Minister ಆಗಿದ್ದರು. ನಾನು ಕೊಡಬೇಡಿ ಎಂದು ಹಿಡಿದುಕೊಂಡಿದ್ದೇನಾ?.....ದಯಮಾಡಿ ನಾನು ಹೇಳುವವರೆಗೂ ಅವಕಾಶ ಕೊಡಿ.....

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲಾ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ಶಿವರಾಂ: .....ಈ ಸದನಕ್ಕೆ ಸತ್ಯ ಹೇಳುವುದು ಬೇಡವೇ? .....

(ಗೊಂದಲ)

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರು ಏನೋ ಹೇಳಲಿಕ್ಕೆ ಎದ್ದು ನಿಂತಿದ್ದಾರೆ. ದಯಮಾಡಿ ಅವರಿಗೆ yield ಆಗಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ: ..... ಮಾನ್ಯ ಧರ್ಮಸಿಂಗ್‌ರವರೇ ಮುಖ್ಯಮಂತ್ರಿ ಗಳಾಗಿದ್ದರು. ಅವರೇ ಪಿಡಬ್ಲ್ಯೂಡಿ ಮಂತ್ರಿಗಳಾಗಿದ್ದರು. ಅವರ ಕಾಲದಲ್ಲೇ ಇದೆಲ್ಲಾ ಆಗಿರುವಂತಾದ್ದು.....

(ಗೊಂದಲ)

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಶಿವರಾಂರವರೂ ಕೂಡ ಈ ಸದನಕ್ಕೆ ನಾಲ್ಕೈದು ಸಲ ಆರಿಸಿ ಬಂದಿದ್ದಾರೆ. ಅವರು ಮಂತ್ರಿಗಳಾಗಿ ಕೂಡ ಕೆಲಸ ಮಾಡಿದ್ದಾರೆ. ಈಗ ಏನಾಗುತ್ತದೆ ಎಂದರೆ, ಆವಾಗ ಇವಾಗ ಅನ್ನತಕ್ಕಂಥದ್ದ ಪ್ರಶ್ನೆ ಅಲ್ಲ. ಇವತ್ತು ಅವರು ನೇರವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುತ್ತಿದ್ದಾರೆ. ಅಲ್ಲಿ ಕೆಲಸ ಏನಾಗಿದೆ? ಏಕೆ ಅಲ್ಲಿ ಅಧಿಕಾರಿಗಳು ಇನ್ಸ್‌ಪೆಕ್ಷನ್‌ಗೆ ಹೋಗುತ್ತಿಲ್ಲ? ಏಕೆ ನೀವು ಅಧಿಕಾರಿಗಳಿಗೆ ಆದ್ಯತೆ ಕೊಟ್ಟು ಮಾಡಿ ಎಂದು ಹೇಳುತ್ತಿಲ್ಲ ಎಂಬುದಷ್ಟೇ ಇಲ್ಲಿರುವ ಮಾತು. ಇವತ್ತು ತಾವು ಸದನದಲ್ಲಿ ಕೇಳಿದಂತಹ ಪ್ರಶ್ನೆಗಳಿಗೆ ರಕ್ಷಣೆ ಕೊಡಬೇಕು. ಇದಕ್ಕೆ ನೇರವಾಗಿ ಅವರು ಮಾನ್ಯ ಮುಖ್ಯಮಂತ್ರಿಗಳನ್ನೇ ಕೇಳಬೇಕು. ನಾನೂ ಕೂಡ ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುತ್ತಿದ್ದೇನೆ. You are the Chief Minister of the State. You have got the greater responsibility. ಇವತ್ತು ನೀವು ಹೇಳಿ. ಅಲ್ಲಿ ಏನಾಗಿದೆಯೋ ಎಲ್ಲಾ ಆಗಿದೆ.

ಅದನ್ನು ಇನ್‌ಸ್ಪೆಕ್ಷನ್ ಮಾಡಲಿಕ್ಕೆ ಆದೇಶ ಕೊಡುತ್ತೇವೆಂದು ಹೇಳಿದರೆ ಸಾಕು. ಅಷ್ಟೇ ಅವರು ಕೇಳುತ್ತಿರುವುದು. ಎಲ್‌ಒಸಿ ಕೇಳುತ್ತಿಲ್ಲ, ಹಣ ಕೇಳುತ್ತಿಲ್ಲ. ಏಕೆ ಇಲ್ಲಿಯವರೆಗೆ ಆದಂತಹ ಕಾಮಗಾರಿಗಳ ಬಗ್ಗೆ ಅವರು ಹೋಗಿ ನೋಡುತ್ತಿಲ್ಲ? ಅದರ ಬಗ್ಗೆ ಮುಖ್ಯಮಂತ್ರಿಗಳು ಹೇಳಬೇಕು. ರಾಜ್ಯದ ಮುಖ್ಯಮಂತ್ರಿ ಆಗಿ ಅವರು ಯಾವುದೇ ಜಿಲ್ಲೆಯವರು ಆಗಿರಲಿ ಅದರ ಬಗ್ಗೆ ಪ್ರಶ್ನೆ ಅಲ್ಲ, When any member asks a question, it becomes the property of the House. He has go ever right to ask the question. ಕ್ಲಾರಿಫಿಕೇಷನ್ ಇದೆ, ಅವರು ಕೇಳುತ್ತಿದ್ದಾರೆ, ಅವರು ಹಿರಿಯ ಸದಸ್ಯರಾಗಿದ್ದಾರೆ. ಇವತ್ತಿನ ದಿವಸ ನೀವು ಅವರ ರಕ್ಷಣೆಗೆ ಬರಬೇಕು. ಅವರಿಗೆ ನೇರವಾಗಿ ಉತ್ತರ ಕೊಟ್ಟರೆ ಸಮಾಧಾನವಾಗುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಅವರು ಗಮನ ಸೆಳೆಯತಕ್ಕಂತಹ ಸಂದರ್ಭದಲ್ಲಿ ಉತ್ತರ ಕೊಡಬೇಕಾದರೆ ತ್ವರಿತವಾಗಿ ಮಾಡುತ್ತೇನೆಂದು ಹೇಳಿದ್ದೇನೆ. ಈಗಾಗಲೇ ಹಾಸನ ಜಿಲ್ಲೆಯಲ್ಲಿ ಮಹಾ ಮಸ್ತಕಾಭಿಷೇಕದ ಕೆಲಸ ಕಾರ್ಯಗಳು ಮುಗಿದಿರುವುದರಿಂದ ಆದಷ್ಟು ಬೇಗ ತೀರ್ಮಾನ ಮಾಡುತ್ತೇನೆ.

ಶ್ರೀ ಬಿ. ಶಿವರಾಮ್: ಮಾನ್ಯ ಅಧ್ಯಕ್ಷರೆ, ನನಗೆ ರೆಕಾರ್ಡ್ ಸರಿಯಾಗಿರಬೇಕು. ನಾನು ಇಲ್ಲಿ ಎಲ್‌ಒಸಿ ವಿಚಾರ ಪ್ರಸ್ತಾಪ ಮಾಡಿಲ್ಲ. ಇನ್‌ಸ್ಪೆಕ್ಷನ್ ವಿಚಾರ ಮಾತ್ರ ಪ್ರಸ್ತಾಪ ಮಾಡಿದ್ದೇನೆ. ಬೇರೆಯವರು ಉತ್ತರ ಹೇಳಿ, ಎಲ್‌ಒಸಿ ಕಡೆಗೆ ದಾರಿ ತಪ್ಪಿಸುವ ಕೆಲಸ ಅಲ್ಲ ಇಲ್ಲಿ. ಅಧಿಕಾರಿಗಳ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಅಧಿಕಾರಿಗಳು ಮನಸೋ ಇಚ್ಛೆ ನಡೆದುಕೊಳ್ಳುತ್ತಾರೆ. ಎಲ್‌ಒಸಿ ಅಲ್ಲಿಂದ ಬಂದಿತ್ತು, ಇಲ್ಲಿಂದ ಬಂದಿತ್ತು ಎಂದು ಹೇಳಿದರೆ ನಾನು ದಡ್ಡ ಅಲ್ಲ. ನಾನೂ ತಿಳಿದುಕೊಂಡಿದ್ದೇನೆ. ಇವರ ನಡವಳಿಕೆಗಳನ್ನು ನೋಡಿ, ಇಲ್ಲಿಯವರೆಗೆ ಇದೊಂದೇ ವಿಚಾರ ಅಲ್ಲ. ಜಿಲ್ಲೆಯಲ್ಲಿ ಇಂತಹ ನೂರಾರು ವಿಚಾರಗಳು ಇವೆ.

ಅಧ್ಯಕ್ಷರು: ಶಿವರಾಮ್‌ರವರೇ, ನೀವು ಏನೋ ಒಂದು ವಿಚಾರ ಎತ್ತಿದಿರಿ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಅವರು ಮಾಡದೇ ಇದ್ದರೆ ಮತ್ತೆ ಈ ಸಭೆಯಲ್ಲಿ ಎತ್ತುವುದಕ್ಕೆ ಅವಕಾಶ ಇದೆ.

ಶ್ರೀ ಬಿ. ಶಿವರಾಮ್: ಮಾನ್ಯ ಮುಖ್ಯಮಂತ್ರಿಗಳು 15 ದಿವಸಗಳಲ್ಲಿ ಮಾಡಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ ಎಂದರೆ, ಯಾರಿಗೆ ಬೇಕಾದರೂ ಅರ್ಥವಾಗುತ್ತದೆ. ಈ ಸದನದಲ್ಲಿ ಏಕೆ ಹೇಳುತ್ತಿಲ್ಲವೆಂಬುದು ಸದನ ಅರ್ಥ ಮಾಡಿಕೊಳ್ಳಲಿ ಸಾಕು.

(ಇ) ವಿಷಯ: ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳಲ್ಲಿ ವಾಹನ ದಟ್ಟಣೆ ಕುರಿತು.

ಶ್ರೀ ಕೆ. ಚಂದ್ರಶೇಖರ್(ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಸ್ತೆಗಳಲ್ಲಿ ವಾಹನಗಳ ಸಂಚಾರ ಹೆಚ್ಚುತ್ತಿರುವುದರಿಂದ ಉಂಟಾಗಿರುವ ಪರಿಸ್ಥಿತಿ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್.ಡಿ. ಕುಮಾರ ಸ್ವಾಮಿ(ಮುಖ್ಯಮಂತ್ರಿಗಳು): ನಾನು ಈ ಕೆಳಕಂಡ ಹೇಳಿಕೆಯನ್ನು ನೀಡಲು ಇಚ್ಛಿಸುತ್ತೇನೆ.

ಬೆಂಗಳೂರು ನಗರದಲ್ಲಿ ವಾಹನಗಳ ಸಂಖ್ಯೆಯು ತ್ವರಿತ ಗತಿಯಲ್ಲಿ ಬೆಳೆಯುತ್ತಿರುತ್ತದೆ. ಪ್ರತಿ ದಿನ ಸುಮಾರು 900 ವಾಹನಗಳು ನೊಂದಣಿಯಾಗುತ್ತಲಿದೆ. 1996ರಲ್ಲಿ ಸುಮಾರು 10 ಲಕ್ಷದಷ್ಟಿದ್ದ ವಾಹನ ಸಂಖ್ಯೆಯು ಇದೀಗ 23 ಲಕ್ಷಕ್ಕೂ ಮೀರಿದೆ. ಇದರ ಪರಿಣಾಮವಾಗಿ ನಗರದ ರಸ್ತೆಗಳು ತೀವ್ರ ಒತ್ತಡಕ್ಕೆ ಸಿಲುಕಿವೆ. ನಗರದ ಬಹುಪಾಲು ಪ್ರಮುಖ ರಸ್ತೆಗಳಾದ ಹೊಸೂರು ರಸ್ತೆ, ಏರ್‌ಪೋರ್ಟ್ ರಸ್ತೆ, ಬಳ್ಳಾರಿ ರಸ್ತೆ, ಮೈಸೂರು ರಸ್ತೆ, ಕನಕಪುರ ರಸ್ತೆ, ಹಳೇ ಮದ್ರಾಸ್ ರಸ್ತೆ, ತುಮಕೂರು ರಸ್ತೆ ಮುಂತಾದವುಗಳು ತಮ್ಮ ಸಾಮರ್ಥ್ಯಕ್ಕಿಂತ 1 $^{1}/_{2}$ ರಿಂದ 2 ಪಟ್ಟು ಹೆಚ್ಚು ವಾಹನಗಳನ್ನು ಸಾಗಿಸುತ್ತಿರುತ್ತವೆ, ಪರಿಣಾಮವಾಗಿ ನಗರದಲ್ಲಿ ತೀವ್ರ ಸಂಚಾರ ದಟ್ಟಣೆಯ (ಸಂಚಾರದ ಒತ್ತಡದ) ಅನುಭವವಾಗುತ್ತಿದೆ.

ಪರಿಸ್ಥಿತಿಯ ಸುಧಾರಣೆಗಾಗಿ ಸರ್ಕಾರವು ಹಲವಾರು ಕ್ರಮಗಳನ್ನು ಕೈಗೊಂಡಿದ್ದು; (1) ಡೈರಿ ವೃತ್ತ, ರಾಜಾಜಿನಗರ ಪ್ರದೇಶ ದ್ವಾರ (ಕೆಳಸೇತುವೆ), ಮೋದಿ ಆಸ್ಪತ್ರೆ ಜಂಕ್ಷನ್, ಆನಂದರಾವ್ ವೃತ್ತ ಮುಂತಾದ ಕಡೆಗಳಲ್ಲಿ ಹಲವಾರು ಮೇಲ್ಸೇತುವೆಗಳನ್ನು ನಿರ್ಮಾಣ ಮಾಡಿದ್ದು ಹಾಗೂ ಏರ್‌ಪೋರ್ಟ್ ರಸ್ತೆ ಮತ್ತು ಜಯದೇವ ಆಸ್ಪತ್ರೆ ಬಳಿಯ ಮೇಲ್ಸೇತುವೆಗಳು ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳಲಿದೆ. ಟ್ಯಾಗೂರ್ ವೃತ್ತ, ಆರ್.ವಿ. ಟೀಚರ್ಸ್ ಕಾಲೇಜ್ ವೃತ್ತ ಮತ್ತು ಯಶವಂತಪುರ